6

ಅಧ್ಯಾಯ

# ಹಣಕಾಸು ನಿರ್ವಹಣೆ

ಬಿಬಿಎಂಪಿಗೆ ರಾಜಕಾಲುವೆಗಳ ನಿರ್ವಹಣೆಗೆ ತನ್ನದೇ ಆದ ಹಣವನ್ನು ಹೊರತುಪಡಿಸಿ, ಜೆಎನ್‌ನರ್ಮ್, ನಗರೋತ್ಥಾನ ಯೋಜನೆ, ವಿಶೇಷ ಮೂಲಸೌಕರ್ಯ ಯೋಜನೆಗಳು, ಹಣಕಾಸು ಆಯೋಗದ ಅನುದಾನ ಮುಂತಾದ ವಿವಿಧ ಯೋಜನೆಗಳ ಅಡಿಯಲ್ಲಿ ಹಣವನ್ನು ಒದಗಿಸಲಾಗುತ್ತದೆ.

## 6.1 ರಾಜಕಾಲುವೆಗಳ ನಿರ್ವಹಣೆಗಾಗಿನ ಹಂಚಿಕೆ ಮತ್ತು ವೆಚ್ಚ

ರಾಜಕಾಲುವೆಗಳ ನಿರ್ವಹಣೆಗೆ ಸಂಬಂಧಿಸಿದಂತೆ 2013–14ರಿಂದ 2017–18ರವರೆಗಿನ ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ–6.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–6.1: ರಾಜಕಾಲುವೆಗಳ ನಿರ್ವಹಣೆಗಾಗಿನ ಹಂಚಿಕೆ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ಹಂಚಿಕೆ | ವೆಚ್ಚ | ಷರಾ |
|---|---|---|---|
| *2013–14* | 107.37 | 82.07 | |
| *2014–15* | 105.09 | 102.54 | |
| *2015–16* | 102.58 | 148.25 | ಜೆಎನ್‌ನರ್ಮ್ ಅಡಿಯಲ್ಲಿ ಕಾರ್ಯಗತಗೊಳ್ಳುತ್ತಿದ್ದ ಕಾಮಗಾರಿಗಳಿಗೆ ಬಿಬಿಎಂಪಿ ವೆಚ್ಚವನ್ನು ಭರಿಸಿತ್ತು, ಆದರೆ 2014–15ರ ಅಂತ್ಯದ ವೇಳೆಗೆ ಆ ಯೋಜನೆಯು ಮುಕ್ತಾಯಗೊಂಡಿದ್ದರಿಂದ ಕೇಂದ್ರ ಸರ್ಕಾರದಿಂದ ಹಣದ ಬಿಡುಗಡೆಯಾಗಲಿಲ್ಲ. ಆದುದರಿಂದ, ವೆಚ್ಚವನ್ನು ತನ್ನದೇ ಆದ ನಿಧಿಯಿಂದ ಭರಿಸಬೇಕಾಯಿತು. |
| *2016–17* | 186.88 | 205.90 | ರಾಜಕಾಲುವೆ ಕಾಮಗಾರಿಗಳಿಗಲ್ಲದೆ, ಇತರ ವಿವಿಧ ಚಟುವಟಿಕೆಗಳಿಗಾಗಿ ರಾಜ್ಯ ಸರ್ಕಾರವು ನಗರೋತ್ಥಾನ ಯೋಜನೆಯಡಿಯಲ್ಲಿ ಬಿಬಿಎಂಪಿಗೆ ಹಣವನ್ನು ಬಿಡುಗಡೆ ಮಾಡಿತು. ಆ ಸ್ವೀಕೃತಿಯನ್ನು ಬಿಬಿಎಂಪಿ ತನ್ನ ಆಯವ್ಯಯ ಅಂದಾಜುಗಳಲ್ಲಿ ವಿಭಿನ್ನ ಚಟುವಟಿಕೆಗಳಿಗೆ ಪ್ರತ್ಯೇಕವಾಗಿ ಪ್ರದರ್ಶಿಸದೆ ಒಟ್ಟು ಮೊತ್ತದ ಹಂಚಿಕೆಯಾಗಿ ತೋರಿಸಿದೆ ಹಾಗೂ ವೆಚ್ಚವನ್ನು, ರಾಜಕಾಲುವೆ ಕಾಮಗಾರಿಗಳನ್ನೂ ಒಳಗೊಂಡಂತೆ, ಪ್ರತಿಯೊಂದು ಚಟುವಟಿಕೆಗೂ ಪ್ರತ್ಯೇಕವಾಗಿ ತೋರಿಸಿತ್ತು. ಪ್ರತ್ಯೇಕ ಹಂಚಿಕೆಯ ವಿವರಗಳ ಅನುಪಸ್ಥಿತಿಯಲ್ಲಿ, ರಾಜಕಾಲುವೆಗಳಿಗೆ ನಿಗದಿಪಡಿಸಿದ ಮೊತ್ತವನ್ನು ಗುರುತಿಸಲು ಸಾಧ್ಯವಾಗಲಿಲ್ಲ. |
| *2017–18* | 268.46 | 599.58 | |
| ಒಟ್ಟು | **770.38** | **1,138.34** | |

ಆಧಾರ: ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ಒದಗಿಸಿದ ಮಾಹಿತಿ ಹಾಗೂ ವಾರ್ಷಿಕ ಆಯವ್ಯಯ ಅಂದಾಜುಗಳು

ಬಿಬಿಎಂಪಿಗೆ 2013–14ನೇ ಸಾಲಿನಲ್ಲಿ ಶೇಕಡಾ 38ರಷ್ಟಿದ್ದ ಸರ್ಕಾರದ ಅನುದಾನವು 2017–18ರ ಸಾಲಿನಲ್ಲಿ ಶೇಕಡಾ 55ಕ್ಕೆ ಏರಿಕೆಯಾಗಿತ್ತು ಎಂಬ ಅಂಶವು ಲೆಕ್ಕಪರಿಶೋಧನಾ ಅವಧಿಯ ಬಿಬಿಎಂಪಿ ಆಯವ್ಯಯಗಳ ವಿಶ್ಲೇಷಣೆಯಿಂದ ತಿಳಿದುಬಂದಿತು. ಇದು ತನ್ನ ಚಟುವಟಿಕೆಗಳಿಗಾಗಿ ಬಿಬಿಎಂಪಿಯು ಸರ್ಕಾರದ ಅನುದಾನಗಳ ಮೇಲೆ ಹೆಚ್ಚೆಚ್ಚು ಅವಲಂಬಿತವಾಗಿರುವುದನ್ನು ಸೂಚಿಸುತ್ತದೆ. ಇದೇ ಅವಧಿಯಲ್ಲಿ ರಾಜಕಾಲುವೆಗಳಿಗಾಗಿ ವ್ಯಯಿಸಿರುವ ವೆಚ್ಚವು ಬಿಬಿಎಂಪಿಯ ಒಟ್ಟು ಆದಾಯ ಮತ್ತು ಒಟ್ಟು ವೆಚ್ಚ ಎರಡಕ್ಕೂ ಶೇಕಡಾ 2ರಿಂದ 8ರಷ್ಟು ಮಾತ್ರವಾಗಿತ್ತು.

ಅಟಲ್ ನಗರ ನವೀಕರಣ ಮತ್ತು ಪುನರೋತ್ಥಾನ ಯೋಜನೆ (ಅಮೃತ್ ಯೋಜನೆ), ಸ್ಮಾರ್ಟ್ ಸಿಟಿ ಯೋಜನೆ ಮುಂತಾದ ಯಾವುದೇ ನಗರಾಭಿವೃದ್ಧಿ ಯೋಜನೆಗಳಲ್ಲೂ ರಾಜಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಈ ಯೋಜನೆಗಳೊಂದಿಗೆ ಸಂವಹನ ಕೊರತೆಯನ್ನು ಮತ್ತು ಮಳೆ ನೀರು ನಿರ್ವಹಣೆಗಾಗಿ ಪ್ರಾಶಸ್ತ್ಯ ನೀಡದಿರುವುದನ್ನು ತೋರಿಸುತ್ತದೆ.

## 6.2 ವಾರ್ಷಿಕ ಆಯವ್ಯಯ ಪ್ರಸ್ತಾವನೆಗಳನ್ನು ತಯಾರಿಸುವಲ್ಲಿ ಲೋಪದೋಷಗಳು

ಯಾವುದೇ ಸಂಸ್ಥೆಯ ಸರಿಯಾದ ಕಾರ್ಯನಿರ್ವಹಣೆಗೆ ವಾರ್ಷಿಕ ಹಣಕಾಸು ಯೋಜನೆ ಮಹತ್ವದ ಅಂಶವಾಗಿರುತ್ತದೆ. ಕಾಮಗಾರಿಗಳ ಅಂದಾಜು ವೆಚ್ಚ, ಸ್ವೀಕರಿಸಿದ ಹಣ, ಭರಿಸಿದ ವೆಚ್ಚ, ಕಾಮಗಾರಿಗಳ ಅನುಷ್ಠಾನಕ್ಕಾಗಿ ಮುಂದಿನ ವರ್ಷದಲ್ಲಿನ ನಿರೀಕ್ಷಿತ ವೆಚ್ಚ ಮತ್ತು ಸಂಭವನೀಯ ಹಣದ ಅಗತ್ಯತೆಯನ್ನು ಆಧರಿಸಿ ವಾರ್ಷಿಕ ಆಯವ್ಯಯ ಪ್ರಸ್ತಾವನೆಗಳನ್ನು ರೂಪಿಸಬೇಕು.

ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ತಾವು ತಯಾರಿಸಿದ ವಾರ್ಷಿಕ ಆಯವ್ಯಯ ಪ್ರಸ್ತಾವನೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಆದುದರಿಂದ, ಬಿಬಿಎಂಪಿಯ ಆಯವ್ಯಯ ಅಂದಾಜುಗಳಲ್ಲಿ ತೋರಿಸಿರುವ ವೆಚ್ಚದ ಅಂಕಿಅಂಶವನ್ನು ಲೆಕ್ಕಪರಿಶೋಧನೆಯು ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ನಿರ್ವಹಿಸಿದ ನಗದು ಪುಸ್ತಕದೊಂದಿಗೆ ಹೋಲಿಸಿತು ಮತ್ತು **ಕೋಷ್ಟಕ–6.2**ರಲ್ಲಿ ತೋರಿಸಿರುವಂತೆ ವ್ಯತ್ಯಾಸಗಳನ್ನು ಗಮನಿಸಿತು.

**ಕೋಷ್ಟಕ–6.2: ಆಯವ್ಯಯ ಅಂದಾಜುಗಳು ಮತ್ತು ನಗದು ಪುಸ್ತಕದ ನಡುವೆ ವೆಚ್ಚದ ಅಂಕಿಅಂಶಗಳಲ್ಲಿ ವ್ಯತ್ಯಾಸಗಳನ್ನು ತೋರಿಸುವ ಕೋಷ್ಟಕ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ ಅಂದಾಜುಗಳ ಅನ್ವಯ ವೆಚ್ಚ | ನಗದು ಪುಸ್ತಕದ ಅನ್ವಯ ವೆಚ್ಚ | ವ್ಯತ್ಯಾಸ |
|---|---|---|---|
| *2013–14* | 86.36 | 82.07 | (+) 4.29 |
| *2014–15* | 58.41 | 102.54 | (–) 44.13 |
| *2015–16* | 148.56 | 148.25 | (+) 0.31 |
| *2016–17* | 195.74 | 205.90 | (–) 10.16 |
| *2017–18* | 570.98 | 599.58 | (–) 28.60 |
| ಒಟ್ಟು | | **1,138.34** | |

ಆಧಾರ: ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ಒದಗಿಸಿದ ಮಾಹಿತಿ ಹಾಗೂ ವಾರ್ಷಿಕ ಆಯವ್ಯಯ ಅಂದಾಜುಗಳು.

ಮರುಹೊಂದಾಣಿಕೆಯು ಹಣಕಾಸಿನ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ಕಾರ್ಯವಾಗಿದೆ. ಆದರೆ, ನಿರಂತರ ಮುಂದುವರಿದ ವ್ಯತ್ಯಾಸವು ವೆಚ್ಚದ ಮರುಹೊಂದಾಣಿಕೆ ಮಾಡುವಲ್ಲಿ ಮತ್ತು ಆಯವ್ಯಯ ಅಂದಾಜುಗಳಲ್ಲಿ ಸರಿಯಾದ ವೆಚ್ಚವನ್ನು ವರದಿ ಮಾಡುವಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಲೋಪವನ್ನು ಸೂಚಿಸುತ್ತದೆ. ಇದಲ್ಲದೆ, ಈ ಅಸಡ್ಡೆಯು ಬಿಬಿಎಂಪಿಯಲ್ಲಿರುವ ಆರ್ಥಿಕ ಅಶಿಸ್ತನ್ನು ತಿಳಿಯಪಡಿಸುತ್ತದೆ.

**ನಿರ್ವಹಣೆಗಾಗಿ ಪ್ರತ್ಯೇಕ ಆಯವ್ಯಯವನ್ನು ಒದಗಿಸದಿರುವುದು–** ಐಆರ್‌ಎಂಎ ಶಿಫಾರಸು ಮಾಡಿದ ಹೊರತಾಗಿಯೂ ಬಿಬಿಎಂಪಿಯು ರಾಜಕಾಲುವೆಗಳ ನಿರ್ವಹಣೆಗಾಗಿ ಪ್ರತ್ಯೇಕ ಆಯವ್ಯಯವನ್ನು ಒದಗಿಸಿರಲಿಲ್ಲ.

ಸಂಬಂಧಪಟ್ಟ ವಿಭಾಗಗಳೊಂದಿಗೆ ವ್ಯತ್ಯಾಸಗಳನ್ನು ಮರುಹೊಂದಾಣಿಕೆ ಮಾಡಲು ಮತ್ತು ಆಯವ್ಯಯ ಅಂದಾಜುಗಳಲ್ಲಿ ವಾಸ್ತವಿಕ ಅಂಕಿಗಳನ್ನು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಕ್ರಮ

ಕೈಗೊಳ್ಳಲಾಗುವುದು ಎಂಬ ಆಯುಕ್ತರ ಉತ್ತರವನ್ನು ರಾಜ್ಯ ಸರ್ಕಾರವು ದೃಢೀಕರಿಸಿತು (ಜನವರಿ 2019/ಆಗಸ್ಟ್ 2020). ಆದಾಗ್ಯೂ, ಸಮನ್ವಯದ ವಿವರಗಳನ್ನು ಅಥವಾ ವ್ಯತ್ಯಾಸಗಳಿಗೆ ನಿರ್ದಿಷ್ಟ ಕಾರಣಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ (ನವೆಂಬರ್ 2019/ಡಿಸೆಂಬರ್ 2020).

## 6.3 14ನೇ ಹಣಕಾಸಿನ ಆಯೋಗದ ಅಡಿಯಲ್ಲಿ ಕಡಿಮೆ ಹಣ ಒದಗಿಸುವಿಕೆ

14ನೇ ಹಣಕಾಸು ಆಯೋಗದ ಶಿಫಾರಸುಗಳ ಅನ್ವಯ, ತಾನು ಸ್ವೀಕರಿಸುವ ಮೂಲ ಅನುದಾನಗಳಲ್ಲಿ ಕನಿಷ್ಠ ಶೇಕಡಾ 10ರಷ್ಟನ್ನು ರಾಜಕಾಲುವೆ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮೀಸಲಿಡಬೇಕಿತ್ತು. 2016–18ರ ಅವಧಿಯಲ್ಲಿ ಬಿಬಿಎಂಪಿಯು ಒಟ್ಟಾರೆ ₹664.34 ಕೋಟಿಗಳನ್ನು ಪಡೆದಿತ್ತಾದರೂ ರಾಜಕಾಲುವೆ ಕಾಮಗಾರಿಗಳಿಗೆ ಕೇವಲ ₹24.65 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದರಿಂದ ₹41.78 ಕೋಟಿ ಹಣ ಕಡಿಮೆ ಬಿಡುಗಡೆಯಾಗಿತ್ತು.

ಹಣಕಾಸು ಆಯೋಗದ ಶಿಫಾರಸುಗಳನ್ನು ಪಾಲಿಸದಿರುವುದು ಮತ್ತು ರಾಜಕಾಲುವೆ ಕಾಮಗಾರಿಗಳಿಗೆ ಕಡಿಮೆ ಹಣವನ್ನು ಬಿಡುಗಡೆ ಮಾಡಿರುವುದು ಮಾಸ್ಟರ್ ಪ್ಲಾನ್‌ನಲ್ಲಿ ಪ್ರಸ್ತಾಪಿಸಿದಂತಹ ಕಾಮಗಾರಿಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಮತ್ತು ಇತರ ಉದ್ದೇಶಗಳಿಗಾಗಿ ಹಣವನ್ನು ಮಾರ್ಗಪಲ್ಲಟ ಮಾಡಲು ದಾರಿ ಮಾಡಿಕೊಡುತ್ತದೆ. ಇದು ರಾಜಕಾಲುವೆ ಕಾಮಗಾರಿಗಳು ಸಾಕಷ್ಟು ಆದ್ಯತೆಯನ್ನು ಪಡೆಯದ ಪರಿಸ್ಥಿತಿಗೆ ಕಾರಣವಾಗುತ್ತದೆ.

ಒಟ್ಟು ಮೂಲ ಅನುದಾನದ ಸ್ವೀಕೃತಿಗಳಲ್ಲಿ ಶೇಕಡಾ 10ರಷ್ಟು ಹಣವನ್ನು ರಾಜಕಾಲುವೆ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮೀಸಲಿಡಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಆಗಸ್ಟ್ 2020).

## 6.4 ಜೆಎನ್‌ನರ್ಮ್ ಬ್ಯಾಂಕ್ ಖಾತೆಗಳ ಮುಂದುವರೆದ ನಿರ್ವಹಣೆ

ಬಿಬಿಎಂಪಿಯು, ನಾಲ್ಕು ಕಣಿವೆಗಳಿಗೆ ಸಂಬಂಧಿಸಿದಂತೆ ಜೆಎನ್‌ನರ್ಮ್ ಅಡಿಯಲ್ಲಿನ ಹಣಕಾಸು ವ್ಯವಹಾರಗಳಿಗಾಗಿ ತಲಾ ಒಂದರಂತೆ ನಾಲ್ಕು ವಿಭಿನ್ನ ಉಳಿತಾಯ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿತ್ತು. ಬಿಬಿಎಂಪಿಯಲ್ಲಿನ ಜೆಎನ್‌ನರ್ಮ್ ಕೋಶವು ಕಾಮಗಾರಿಗಳನ್ನು ಕಾರ್ಯಗತಗೊಳಿಸುತ್ತಿತ್ತು ಮತ್ತು ಹಣಕಾಸು ವ್ಯವಹಾರ ನಿರ್ವಹಿಸುತ್ತಿತ್ತು. ಜೆಎನ್‌ನರ್ಮ್ ಕೋಶವು ನಿರ್ವಹಿಸುತ್ತಿದ್ದ ನಗದು ಪುಸ್ತಕದ ಪರಿಶೀಲನೆಯು ಜನವರಿ 2015ರ ವೇಳೆಗೆ ಜೆಎನ್‌ನರ್ಮ್ ಅಡಿಯಲ್ಲಿ ರಾಜಕಾಲುವೆಗಳಿಗೆ ಸಂಬಂಧಿಸಿದ ವಹಿವಾಟುಗಳು ಮುಕ್ತಾಯಗೊಂಡಿದ್ದವು ಎಂಬುದನ್ನು ತೋರಿಸಿತು. ಮೇ 2018ರಲ್ಲಿದ್ದಂತೆ, ಈ ಬ್ಯಾಂಕ್ ಖಾತೆಗಳಲ್ಲಿ ₹2.37 ಲಕ್ಷ ಹಣವಿದ್ದಿತು. ನಿಶ್ಚಿತ ಠೇವಣಿಗಳಲ್ಲಿದ್ದ ₹7.00 ಲಕ್ಷವನ್ನು ನಗದು ಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲದಿದ್ದುದು ಅಸಮರ್ಪಕ ಹಣಕಾಸು ನಿರ್ವಹಣೆಯನ್ನು ಸೂಚಿಸುತ್ತಿತ್ತು. ಜೆಎನ್‌ನರ್ಮ್ ಅಡಿಯಲ್ಲಿನ ಉಳಿಕೆ ಕಾಮಗಾರಿಗಳಿಗೆ ಬಿಬಿಎಂಪಿಯು ತನ್ನದೇ ಹಣದಿಂದ ವೆಚ್ಚವನ್ನು ಭರಿಸುತ್ತಿದ್ದರೂ ಸಹ ಯೋಜನೆ ಮುಕ್ತಾಯಗೊಂಡ ನಾಲ್ಕು ವರ್ಷಗಳ ನಂತರವೂ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಲು ಅಥವಾ ಹಣವನ್ನು ಮುಖ್ಯ ಖಾತೆಗೆ ಅಥವಾ ಬೃಹತ್ ನೀರುಗಾಲುವೆ ಖಾತೆಗೆ ವರ್ಗಾವಣೆ ಮಾಡಲು ಬಿಬಿಎಂಪಿ ಕ್ರಮ ಕೈಗೊಂಡಿರಲಿಲ್ಲ.

ಮುಂದಿನ ಕ್ರಮಕ್ಕಾಗಿ ಈ ವಿಷಯವನ್ನು ಉನ್ನತ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂಬ ಆಯುಕ್ತರ ಉತ್ತರವನ್ನು ರಾಜ್ಯ ಸರ್ಕಾರವು ದೃಢೀಕರಿಸಿತು (ಜನವರಿ 2019) ಮತ್ತು ಆಗಸ್ಟ್ 2020ರ ಉತ್ತರದಲ್ಲಿಯೂ ಸಹ ಇದನ್ನೇ ಪುನರುಚ್ಚರಿಸಲಾಯಿತು. ಬಿಬಿಎಂಪಿ ಈ ವಿಷಯದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಲೆಕ್ಕಪರಿಶೋಧನೆಯು ಈ ಅಂಶವನ್ನು ಎತ್ತಿ ತೋರಿಸಿದ ನಂತರವೂ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸದಿರುವುದು ಮತ್ತು ನಿಶ್ಚಿತ ಠೇವಣಿಗಳನ್ನು

ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು, ಈ ಖಾತೆಗಳಲ್ಲಿನ ಮೊತ್ತವು ಗಮನಕ್ಕೆ ಬಾರದೇ ಹೋಗುವ ಅಪಾಯದಿಂದ ಕೂಡಿದೆ.

## 6.5 ಇಲಾಖೆಗಳಿಗೆ ಜಮೆ ಮಾಡಿದ ಶಾಸನಬದ್ಧ ವಸೂಲಾತಿಗಳನ್ನು ಹೊಂದಾಣಿಕೆ ಮಾಡದಿರುವುದು

ಬಿಬಿಎಂಪಿ (ರಾಜಕಾಲುವೆ ವಿಭಾಗ) ಏಪ್ರಿಲ್ 2012ರಿಂದಲೂ ಬಡ್ಡಿ ಗಳಿಸುವ ಉಳಿತಾಯ ಖಾತೆಯ ಬದಲಿಗೆ ಬಡ್ಡಿ ಬಾರದಿರುವ ಚಾಲ್ತಿ ಖಾತೆಯೊಂದನ್ನು (ಸಂಖ್ಯೆ:04091010005485) ನಿರ್ವಹಿಸುತ್ತಿತ್ತು. ಏಪ್ರಿಲ್ 2015ರವರೆಗೂ ರಾಜಕಾಲುವೆ ಕಾಮಗಾರಿಗಳ ಅನುಷ್ಠಾನಕ್ಕೆ ಅಗತ್ಯವಾದ ಹಣವನ್ನು ಬಿಬಿಎಂಪಿಯ ಮುಖ್ಯ ಖಾತೆಯಿಂದ ಈ ಖಾತೆಗೆ ಬಿಡುಗಡೆ ಮಾಡಲಾಗಿತ್ತು. ಕಾಮಗಾರಿಗಳ ಅನುಷ್ಠಾನಕ್ಕಾಗಿ ಕೊನೆಯದಾಗಿ 6 ಏಪ್ರಿಲ್ 2015 ರಂದು ₹20 ಕೋಟಿ ಹಣ ವರ್ಗಾವಣೆ ಮಾಡಲಾಗಿತ್ತು. ಜೂನ್ 2015ರ ಅಂತ್ಯದಲ್ಲಿದ್ದಂತೆ ಶಿಲ್ಕು ₹12.21 ಲಕ್ಷವಾಗಿದ್ದಿತು. ಆ ನಂತರ (ಜುಲೈ 2015ರಿಂದ) ಬಿಬಿಎಂಪಿ ಮುಖ್ಯ ಖಾತೆಯಿಂದ ನೇರವಾಗಿ ಗುತ್ತಿಗೆದಾರರ ಬ್ಯಾಂಕ್ ಖಾತೆಗಳಿಗೆ ಪಾವತಿಗಳನ್ನು ಮಾಡಲಾಯಿತು ಮತ್ತು ಆದಾಯ ತೆರಿಗೆ, ವ್ಯಾಟ್/ಜಿಎಸ್‌ಟಿ, ಕಾರ್ಮಿಕ ಉಪಕರ, ರಾಜಧನ, ಗುತ್ತಿಗೆದಾರರ ಹಿತನಿಧಿ ಮತ್ತು ಹೆಚ್ಚಿನ ಭದ್ರತಾ ಠೇವಣಿ ಮುಂತಾದ ಶಾಸನಬದ್ಧ ಕಡಿತಗಳಿಗೆ ಬಿಲ್‌ಗಳಿಂದ ಕಡಿತಗೊಳಿಸಿದ ಮೊತ್ತವನ್ನು, ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಲು, ಈ ಖಾತೆಗೆ ವರ್ಗಾಯಿಸಲಾಗುತ್ತಿತ್ತು.

ಜುಲೈ 2017ರಿಂದ ಈ ಖಾತೆಯನ್ನು ಫ್ಲೆಕ್ಸಿ ಸೂಪರ್ ಚಾಲ್ತಿ ಖಾತೆಯಾಗಿ ಪರಿವರ್ತಿಸಲಾಯಿತು, ಇದರಲ್ಲಿನ ₹5.00 ಲಕ್ಷಕ್ಕಿಂತ ಹೆಚ್ಚಿನ ಹಣವು ಸ್ವಯಂಚಾಲಿತವಾಗಿ ನಿಶ್ಚಿತ ಠೇವಣಿಗಳಿಗೆ ವರ್ಗಾವಣೆಯಾಗುತ್ತಿತ್ತು.

ಲೆಕ್ಕಪರಿಶೋಧನೆಯು ಬ್ಯಾಂಕ್ ಖಾತೆಯ ಪಾಸ್‌ಶೀಟ್‌ಗಳನ್ನು ವಿಶ್ಲೇಷಿಸಿದಾಗ ಅದರಲ್ಲಿ ಆದಾಯ ತೆರಿಗೆ ಮತ್ತು ಗುತ್ತಿಗೆದಾರರ ಹಿತನಿಧಿಗೆ ಗುತ್ತಿಗೆದಾರರ ಬಿಲ್‌ಗಳಿಂದ ಕಡಿತಗೊಳಿಸಿ ನೀಡಲಾಗಿದ್ದ ಕ್ರಮವಾಗಿ ₹43.86 ಲಕ್ಷ ಮತ್ತು ₹37.32 ಲಕ್ಷ ಒಟ್ಟು ಮೊತ್ತದ ಚೆಕ್‌ಗಳನ್ನು ಪಾಸ್‌ಶೀಟ್‌ಗಳಲ್ಲಿ ಪತ್ತೆ ಹಚ್ಚಲಾಗಲಿಲ್ಲ. ಈ ಚೆಕ್‌ಗಳನ್ನು ನಗದೀಕರಿಸದೇ ಉಳಿದಿರುವ ಸಂಭವವಿದೆ. ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ಈ ನಿಟ್ಟಿನಲ್ಲಿ ಯಾವುದೇ ಮರುಹೊಂದಾಣಿಕೆಯನ್ನು ಮಾಡಿಲ್ಲ. ಯಾವುದೇ ಹೊಂದಾಣಿಕೆಯ ಅನುಪಸ್ಥಿತಿಯಲ್ಲಿ, ಸ್ವೀಪ್–ಇನ್ ಠೇವಣಿ ಖಾತೆಗಳಲ್ಲಿ ಲಭ್ಯವಿರುವ ಶಿಲ್ಕು ₹31.95 ಕೋಟಿ ಮೊತ್ತದ ಭಾಗವಾಗಿರುವ ವಿವಿಧ ಬಾಬ್ತುಗಳ ಮೊತ್ತವನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

ಬ್ಯಾಂಕ್ ಖಾತೆಯಲ್ಲಿನ ಬಾಕಿ ಹಣವನ್ನು ನಿಯತಕಾಲಿಕವಾಗಿ ಹೊಂದಾಣಿಕೆ ಮಾಡಲು ಲೆಕ್ಕಪತ್ರ ಶಾಖೆಗೆ ಸೂಚನೆಗಳನ್ನು ನೀಡಲಾಗಿದೆ ಎಂಬ ಆಯುಕ್ತರ ಉತ್ತರವನ್ನು ರಾಜ್ಯ ಸರ್ಕಾರವು ದೃಢೀಕರಿಸಿತು (ಜನವರಿ 2019/ಆಗಸ್ಟ್ 2020). ಆದಾಗ್ಯೂ, ಯಾವುದೇ ಹೊಂದಾಣಿಕೆಯ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿಲ್ಲ (ನವೆಂಬರ್ 2019/ಡಿಸೆಂಬರ್ 2020).

## 6.6 ದುರ್ಬಲ ಹಣಕಾಸಿನ ನಿಯಂತ್ರಣ ವ್ಯವಸ್ಥೆ

**ಹಣಕಾಸಿನ ಮೂಲ ದಾಖಲೆಗಳ ನಿರ್ವಹಣೆ ಮಾಡದಿರುವುದು** – ವಹಿವಾಟುಗಳ ಸರಿಯಾದ ಲೆಕ್ಕಪತ್ರಗಳನ್ನು ನಿರ್ವಹಿಸಲು ಅನುದಾನ ವಹಿ, ಠೇವಣಿ ವಹಿ/ಭದ್ರತೆಗಳ ವಹಿ, ಕಾಮಗಾರಿಗಳ ವೆಚ್ಚದ ವಹಿ, ಮಾಸಿಕ ಲೆಕ್ಕಪತ್ರಗಳು, ಮುಂಗಡಗಳ ವಹಿ ಮತ್ತು ಇತರೆ ದಾಖಲೆಗಳನ್ನು ನಿರ್ವಹಿಸಿರಬೇಕೆಂದು ಕರ್ನಾಟಕ ಲೋಕೋಪಯೋಗಿ ಲೆಕ್ಕಸಂಹಿತೆಯು ಉಪಬಂಧಗಳು ನಿಗದಿಪಡಿಸುತ್ತವೆ. ಗುತ್ತಿಗೆ ಕಾಮಗಾರಿಗಳ ಮೇಲೆ ಗಣನೀಯ ವೆಚ್ಚವನ್ನು ಭರಿಸಿದ ಹೊರತಾಗಿಯೂ, ಮೇಲಿನ ಯಾವುದೇ

ವಹಿಗಳು/ದಾಖಲೆಗಳನ್ನು ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ನಿರ್ವಹಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ನಗದು ಪುಸ್ತಕದ ಅಸಮರ್ಪಕ ನಿರ್ವಹಣೆ** – ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ನಿರ್ವಹಿಸಿದ್ದ ನಗದು ಪುಸ್ತಕವು, ಕೆಳಗಿನ ಕಾರಣಗಳಿಂದ, ಅಸಮರ್ಪಕವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

- ಪ್ರತಿ ದಿನದ ಆರಂಭದಲ್ಲಿ ಕೈಯಲ್ಲಿರುವ ಬಾಕಿ ಹಣವನ್ನು ಸ್ವೀಕೃತಿಯ ಬದಿಯಲ್ಲಿ ನಮೂದಿಸಿರಲಿಲ್ಲ. ಪ್ರತಿ ದಿನದ ಕೊನೆಯಲ್ಲಿ ಮುಕ್ತಾಯದ ಶಿಲ್ಕನ್ನು ನಮೂದಿಸಿರಲಿಲ್ಲ, ತಿಂಗಳ ಕೊನೆಯಲ್ಲಿ ವಹಿವಾಟಿನ ಗೋಷ್ವಾರೆಯನ್ನು ದಾಖಲಿಸಿರಲಿಲ್ಲ, ನಗದು ಪುಸ್ತಕದಲ್ಲಿನ ನಮೂದುಗಳನ್ನು ಕಚೇರಿಯ ಮುಖ್ಯಸ್ಥರ (ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ) ಬದಲಿಗೆ ವಲಯಗಳ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಂದ ದೃಢೀಕರಿಸಲಾಗಿತ್ತು;
- ನಗದು ಪುಸ್ತಕದ ಶಿಲ್ಕು ಮತ್ತು ಬ್ಯಾಂಕ್ ಖಾತೆಯ ಶಿಲ್ಕಿನ ನಡುವೆ ಹೊಂದಾಣಿಕೆ ಮಾಡಿರಲಿಲ್ಲ ಮತ್ತು ದಾಖಲಿಸಿರಲಿಲ್ಲ;
- ಕಾಮಗಾರಿಗಳನ್ನು ವಿವಿಧ ಯೋಜನೆಗಳಡಿ ಮತ್ತು ವಿವಿಧ ವಲಯಗಳಲ್ಲಿ ಕಾರ್ಯಗತಗೊಳಿಸಿದ್ದರೂ ಸಹ ಕಛೇರಿಯಲ್ಲಿ ಒಂದೇ ನಗದು ಪುಸ್ತಕವನ್ನು ನಿರ್ವಹಿಸಲಾಗಿತ್ತು. ತತ್ಪರಿಣಾಮವಾಗಿ, ಯೋಜನಾವಾರು ಮತ್ತು ವಲಯವಾರು ವೆಚ್ಚಗಳನ್ನು ಪರಿಶೀಲಿಸಲಾಗಲಿಲ್ಲ.

ಸಂಹಿತೆಯ ಉಪಬಂಧಗಳಲ್ಲಿ ನಿಗದಿಪಡಿಸಿರುವಂತೆ ಎಲ್ಲ ದಾಖಲೆಗಳನ್ನು ನಿರ್ವಹಿಸುವಂತೆ ಲೆಕ್ಕಪತ್ರ ಶಾಖೆಗೆ ಸೂಚನೆಗಳನ್ನು ನೀಡಲಾಗಿದೆ ಎಂಬ ಆಯುಕ್ತರ ಉತ್ತರವನ್ನು ಸರ್ಕಾರವು ದೃಢೀಕರಿಸಿತು (ಆಗಸ್ಟ್ 2020).

**ಶಿಫಾರಸು–20:** *ಪ್ರತಿಯೊಂದು ಕಾರ್ಯದ ಅಡಿಯಲ್ಲಿಯೂ ಬಂಡವಾಳ ಮತ್ತು ರಾಜಸ್ವ ಚಟುವಟಿಕೆಗಳೆರಡಕ್ಕೂ ಯೋಜನಾವಾರು ಹಣದ ಸ್ವೀಕೃತಿ ಮತ್ತು ಅದಕ್ಕೆ ಪ್ರತಿಯಾಗಿ ಭರಿಸಿದ ವೆಚ್ಚಗಳನ್ನು ಸ್ಪಷ್ಟವಾಗಿ ತೋರಿಸುವ ಆಯವ್ಯಯವನ್ನು ಬಿಬಿಎಂಪಿ ತಯಾರಿಸಬೇಕು.*

# ನಿರ್ಣಯ

ಮೂಲ ಹಣಕಾಸು ದಾಖಲೆಗಳಾದ ಅನುದಾನ ವಹಿ, ಠೇವಣಿ ವಹಿ, ಭದ್ರತೆಗಳ ವಹಿ, ಕಾಮಗಾರಿಗಳ ವೆಚ್ಚದ ವಹಿ ಮುಂತಾದವುಗಳನ್ನು ನಿರ್ವಹಿಸದ ಕಾರಣ ಬಿಬಿಎಂಪಿಯು ದುರ್ಬಲ ಆರ್ಥಿಕ ನಿಯಂತ್ರಣ ಕಾರ್ಯವಿಧಾನವನ್ನು ಹೊಂದಿತ್ತು. ಇದಲ್ಲದೆ, ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ನಿರ್ವಹಿಸುತ್ತಿದ್ದ ನಗದು ಪುಸ್ತಕವು ಅಪೂರ್ಣವಾಗಿತ್ತು. ನಗರೋತ್ಥಾನ ಯೋಜನೆಯಡಿ ರಾಜಕಾಲುವೆ ಚಟುವಟಿಕೆಗಳಿಗೆ ಹಣ ಹಂಚಿಕೆಯನ್ನು ಸೂಚಿಸಿರಲಿಲ್ಲವಾಗಿ. ಆಯವ್ಯಯ ತಯಾರಿಕೆಯು ನ್ಯೂನತೆಯಿಂದ ಕೂಡಿತ್ತು. 2013–14ರಿಂದ 2017–18ರ ಅವಧಿಯಲ್ಲಿ ರಾಜಕಾಲುವೆಗಳಿಗೆ ಮಾಡಿದ ವೆಚ್ಚವು ಬಿಬಿಎಂಪಿಯ ಒಟ್ಟು ವೆಚ್ಚದ ಶೇಕಡಾ 2ರಿಂದ 8ರಷ್ಟಿದ್ದಿತು. ರಾಜಕಾಲುವೆಗಳ ನಿರ್ವಹಣೆಗಾಗಿ ಪ್ರತ್ಯೇಕ ಆಯವ್ಯಯವಿರಲಿಲ್ಲ ಮತ್ತು ಯಾವುದೇ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ರಾಜಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದಿರುವುದು ಪರಿಣಾಮಕಾರಿಯಾದ ಮಳೆನೀರಿನ ನಿರ್ವಹಣೆ ಬಗೆಗೆ ಬಿಬಿಎಂಪಿಯ ಬದ್ಧತೆಯ ಕೊರತೆಯನ್ನು ಸೂಚಿಸುತ್ತದೆ.

## ಪ್ರಮುಖ ಲೆಕ್ಕಪರಿಶೋಧನಾ ಫಲಿತಾಂಶಗಳ ಸಾರಾಂಶ

| ಕಂಡಿಕೆ ಸಂಖ್ಯೆ | ಲೆಕ್ಕಪರಿಶೋಧನಾ ಫಲಿತಾಂಶಗಳು |
|---|---|
| 6.1 | ಬಿಬಿಎಂಪಿಯು ಹೆಚ್ಚಾಗಿ ಸರ್ಕಾರದ ಅನುದಾನಗಳನ್ನು ಅವಲಂಬಿಸಿತ್ತು. 2013–14ರಿಂದ 2017–18ರ ಅವಧಿಯಲ್ಲಿ ರಾಜಕಾಲುವೆಗಳಿಗಾಗಿ ಮಾಡಿದ ವೆಚ್ಚವು ಬಿಬಿಎಂಪಿಯ ಒಟ್ಟು ರಾಜಸ್ವ ಮತ್ತು ಒಟ್ಟು ವೆಚ್ಚದ ಶೇಕಡಾ 2ರಿಂದ 8ರಷ್ಟಾಗಿದ್ದು, ನಗಣ್ಯವಾಗಿದ್ದಿತು. |
| 6.2 | ಆಯವ್ಯಯ ಅಂದಾಜುಗಳಲ್ಲಿ ತೋರಿಸಲಾದ ಅಂಕಿಅಂಶಗಳು ಮತ್ತು ನಗದು ಪುಸ್ತಕದಲ್ಲಿ ದಾಖಲಾದ ವಾಸ್ತವಿಕ ವೆಚ್ಚದ ನಡುವೆ ವ್ಯತ್ಯಾಸಗಳಿದ್ದವು. ಇದು ಸಮನ್ವಯ ಕಾರ್ಯವಿಧಾನದ ಮತ್ತು ವೆಚ್ಚವನ್ನು ಸರಿಯಾಗಿ ವರದಿ ಮಾಡುವಲ್ಲಿನ ಕೊರತೆಯನ್ನು ಸೂಚಿಸುತ್ತದೆ ಮತ್ತು ಬಿಬಿಎಂಪಿಯಲ್ಲಿರುವ ಆರ್ಥಿಕ ಅಶಿಸ್ತನ್ನು ಬಹಿರಂಗಪಡಿಸುತ್ತದೆ. |
| 6.3 | 14ನೇ ಹಣಕಾಸು ಆಯೋಗದಡಿಯಲ್ಲಿ ಬಿಬಿಎಂಪಿಯು ಒದಗಿಸಿದ ಹಣವು ₹41.78 ಕೋಟಿಗಳಷ್ಟು ಕಡಿಮೆಯಾಗಿದ್ದಿತು. |
| 6.4 | ಮುಖ್ಯ ಇಂಜಿನಿಯರ್, ಬೃಹತ್ ನೀರುಗಾಲುವೆ ವಿಭಾಗ ಇವರು ಕಾಮಗಾರಿಗಳ ವೆಚ್ಚದ ಅನುಸೂಚಿ, ಮಾಸಿಕ ಲೆಕ್ಕಪತ್ರಗಳು, ಮುಂಗಡಗಳ ವಹಿ ಮುಂತಾದ ಮೂಲ ದಾಖಲೆಗಳನ್ನು ನಿರ್ವಹಿಸಿರಲಿಲ್ಲ. ಪ್ರತಿ ದಿನದ ಕೊನೆಯಲ್ಲಿ ಮುಕ್ತಾಯದ ಶಿಲ್ಕನ್ನು ತೋರಿಸದ ಕಾರಣ ಹಾಗೂ ನಗದು ಮತ್ತು ಬ್ಯಾಂಕ್ ಶಿಲ್ಕುಗಳ ನಡುವೆ ಹೊಂದಾಣಿಕೆಯನ್ನು ಮಾಡಿ ದಾಖಲು ಮಾಡಿರಲಿಲ್ಲವಾದ್ದರಿಂದ ನಿರ್ವಹಿಸಿದ್ದ ನಗದು ಪುಸ್ತಕ ಅಸಮರ್ಪಕವಾಗಿತ್ತು. |

ನಿವೇದಿತ

ಬೆಂಗಳೂರು
ದಿನಾಂಕ 26 JUL 2021

(ಇ.ಪಿ.ನಿವೇದಿತ)
ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I)

ಮೇಲುಸಹಿ ಮಾಡಿದೆ

ನವದೆಹಲಿ
ದಿನಾಂಕ 30 JUL 2021

(ಗಿರೀಶ್ ಚಂದ್ರ ಮುರ್ಮು)
ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು